ಅವನು ಮುದುಕ; ಹಣ್ಣು ಹಣ್ಣು ಮುದುಕ. ಕಾಡಿಗೆ ಹೋಗಿದ್ದಾನೆ. ಸೌದೆಯನ್ನು ಆರಿಸಿ ಹೊರೆಯನ್ನು ಕಟ್ಟಿಕೊಂಡಿದ್ದಾನೆ. ಆದರೆ ಅವನಿಗೆ ಅದನ್ನು ತಲೆಯ ಮೇಲೆ ಇಟ್ಟುಕೊಳ್ಳಲು ಆಗುತ್ತಿಲ್ಲ – ವಯಸ್ಸಿನ ಕಾರಣದ ಅಶಕ್ತಿಯಿಂದಾಗಿ. 'ಅಯ್ಯೋ! ನನಗೆ ಸಾವಾದರೂ ಬರಬಾರದೆ?' ಎಂದು ದೀನನಾಗಿ ಉದ್ಗರಿಸಿದ.

ಕೂಡಲೇ ಪ್ರತ್ಯಕ್ಷವಾಯಿತು ಸಾವು. 'ಅಜ್ಜ, ನೀನು ನನ್ನನ್ನು ಕರೆದಂತಾಯಿತು! ಏನು ಸಮಾಚಾರ' ಎಂದಿತು.

'ಏನಿಲ್ಲ, ಈ ಕಟ್ಟಿಗೆಯ ಹೊರೆಯನ್ನು ಸ್ವಲ್ಪ ತಲೆಯ ಮೇಲೆ ಇಡುವೆಯಾ?' ಎಂದ ಆ ಮುದುಕ.

★★★

ಇದು ಇಸೋಪನ ಕಥೆಗಳಲ್ಲಿ ಒಂದು. ಹೇಗೆ ಇದನ್ನು ಅರ್ಥ ಮಾಡಿಕೊಳ್ಳುವುದು? ಕಷ್ಟ. ಹೀಗಾಗಿಯೇ ಈ ಕಥೆ ತುಂಬ ಜನಪ್ರಿಯವಾಗಿಲ್ಲ ಎನಿಸುತ್ತದೆ. ಆದರೆ ವಾಸ್ತವವಾಗಿ ನೋಡಿದರೆ ಈ ಕಥೆ ಹೆಚ್ಚು ಜನರನ್ನು ಮುಟ್ಟಬೇಕಿತ್ತು. ಬದುಕಿನ ಬೆಲೆಯನ್ನೂ ಸಾವಿನ ಬೆಲೆಯನ್ನೂ ಈ ಕಥೆ ತುಂಬ ಸೊಗಸಾಗಿ ಹೇಳುತ್ತಿದೆ. ನಮ್ಮ ಗೊಣಗಾಟಗಳು ಹೇಗೆ ಜೀವನಸೌಂದರ್ಯವನ್ನು ನಾಶ ಮಾಡಬಲ್ಲದು ಎಂದೂ ತಿಳಿಸುತ್ತಿದೆ.

ನಮ್ಮ ಮನಸ್ಸು ಸದಾ ಸುಖವನ್ನೇ ಬಯಸುತ್ತಿರುತ್ತದೆ; ಸುಖ ಎಂದರೆ ಸುಖ ಅಷ್ಟೆ! ನಮ್ಮ ಎಲ್ಲ ಬುದ್ಧಿಯ ಹಿಂದಿರುವ ಬಯಕೆ 'ಸುಖ'; ಎಲ್ಲ ಕ್ರಿಯೆಗಳಿಗೂ ಮೂಲ 'ಸುಖ'ದ ಬಯಕೆ. ಸುಖವಿಲ್ಲದ ಒಂದು ಕ್ಷಣವನ್ನೂ ನಾವು ಬಯಸುವುದಿಲ್ಲ, ಅಲ್ಲವೆ? ಆದರೆ ಇಂಥ ಸರ್ವಕಾಲ ಸುಖಸ್ಥಿತಿ ಸಾಧ್ಯವೆ?

ನಾವು ಸುಖ ಬಂದಾಗ ಉಬ್ಬಿಹೋಗುತ್ತೇವೆ; ದುಃಖ ಬಂದಾಗ ಕುಗ್ಗಿಹೋಗುತ್ತೇವೆ. ಈ ಎರಡೂ ಕೂಡ ನಮ್ಮ ಬುದ್ಧಿಯನ್ನು, ಸಮತೋಲನವನ್ನು ಕೆಡಿಸಬಹುದು. ಆಗ ನಮ್ಮ ಮಾತು–ಕೃತಿಗಳು ಹಾದಿ ತಪ್ಪುತ್ತವೆ. ಸುಖ–ದುಃಖಗಳಿಗೆ ವಶವಾಗಿ ವಾಸ್ತವವನ್ನು ಮರೆತುಬಿಡುತ್ತೇವೆ. ಆಗಲೂ ಏನೇನು ಮಾತುಗಳು, ಆಲೋಚನೆಗಳು ನಮ್ಮನ್ನು ದಿಕ್ಕುತಪ್ಪಿಸುತ್ತವೆ. ಇದರ ಬಗ್ಗೆ ನಾವು ಎಚ್ಚರದಿಂದ ಇರಬೇಕಾಗುತ್ತದೆ. ಸುಖದ ಅಮಲು ಹಾಗೂ ದುಃಖದ ನೋವು ನಮ್ಮಿಂದ ಏನೇನೋ ಮಾತುಗಳನ್ನು ಆಡಿಸತೊಡಗುತ್ತವೆ.